1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.3370/2017

ದಿಃ 11.04.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 3

ಚಾಸಾಃ 9

| | |
|---|---|
| ಹೆಸರು | ಃ ಡಾ.ಮಹೇಂದ್ರ ಕುಮಾರ್ |
| ತಂದೆಯ ಹೆಸರು | ಃ ಎಂ.ಹೆಚ್.ಪುಟ್ಟಣ್ಣ |
| ವಯಸ್ಸು | ಃ 64 ವರ್ಷ |
| ಉದ್ಯೋಗ | ಃ ಮೆಡಿಕಲ್ ಡಾಕ್ಟರ್, ಸಾಗರಲ್ ಆಸ್ಪತ್ರೆ. |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸುಮಾರು ಮೂರು ವರ್ಷಗಳಿಂದ ಸಾಗರ್ ಆಸ್ಪತ್ರೆಯಲ್ಲಿ ವೈದ್ಯಾಕೀಯ ನಿರ್ದೇಶಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ನನಗೆ ಆರೋಪಿಯ ವೈಯಕ್ತಿಕ ಪರಿಚಯ ಇಲ್ಲ. ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರ ಪಡೆಯಲು ಆರೋಪಿತನು ಕೆಲವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪರಿಹಾರ ಪಡೆದಿರುತ್ತಾರೆ. ಆರೋಪಿತರು ಸದರಿ ದಾಖಲಾತಿಗೆಗೆ ಸಂಬಂಧಪಟ್ಟಂತೆ ಲೆಟರೆಡ್‌ಗಳನ್ನು ಸೃಷ್ಟಿಸಿರುತ್ತಾನೆ ಹಾಗೂ ಸದರಿ ಲೆಟರೆಡ್‌ಗಳಲ್ಲಿ ಸುಳ್ಳು ಆಸ್ಪತ್ರೆಯ ಹಾಗೂ ರೋಗಿಗಳ ವಿವರಗಳನ್ನು ಸಲ್ಲಿಸಿರುತ್ತಾನೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖಾಧಿಕಾರಿಗಳು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಮ್ಮ ಆಸ್ಪತ್ರೆಗೆ ಸಂಬಂಧಪಟ್ಟಂತೆ ಆರೋಪಿಗಳು ಸೃಷ್ಟಿತ ದಾಖಲೆಗಳನ್ನು ಸಾಕ್ಷಿಯು ಈಗ ನೋಡಿದ್ದು, ಅವುಗಳನ್ನು ನಿಪಿ.9 ಮತ್ತು ನಿಪಿ.10 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆಎಂಎಂ ವಕೀಲರಿಂದಃ

ಮೇಲೆ ತಿಳಿಸಿದ ಸಾಗರ್ ಆಸ್ಪತ್ರೆ ಬೇರೆ ಮತ್ತು ಸಾಗರ್ ಕ್ಲಿನಿಕ್ ಬೇರೆ ಎಂದುದ ಹೇಳುವುದು ಸರಿ. ಇವತ್ತಿನವರೆಗೂ ಆರೋಪಿತರನ್ನು ನಾನು ನೋಡಿರುವುದಿಲ್ಲ ಹಾಗೂ ಅವರ ಪರಿಚಯ ನನಗೆ ಇರುವುದಿಲ್ಲ. ಸಾಗರ್ ಕ್ಲಿನಿಕ್‌ನಲ್ಲಿ ಕೇವಲ ಹೊರರೋಗಿಗಳನ್ನು ಮಾತ್ರ ನೋಡುತ್ತೇವೆಂದರೆ ಸರಿ. ಸಾಗರ್ ಆಸ್ಪತ್ರೆಯಲ್ಲಿ ಮಾತ್ರ ರೋಗಿಯನ್ನು ಒಳರೋಗಿಯಾಗಿ ನೋಡುತ್ತೇವೆಂದರೆ ಸರಿ. ಸಾಗರ್ ಕ್ಲಿನಿಕ್‌ನಲ್ಲಿ ಯಾವುದೇ ರೆಪೀಾಗಿಗಳನ್ನು ಒಳರೋಗಿಯಾಗಿ ನೋಡುವುದಿಲ್ಲ ಎಂದರೆ ಸರಿ. ನಾನು ಪೊಲೀಸ್‌ನವರ ಮುಂದೆ ಹೇಳಿಕೆಯನ್ನು ಕೊಟ್ಟಿಲ್ಲ ಹಾಗೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ರೀತಿ ಆರೋಪಿಗಳು ಯಾವುದೇ ದಾಖಲೆಗಳನ್ನು ಸೃಷ್ಟಿ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನೀಡುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ